**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 05-08-2023.**

**ಪಾಟೀ ಸವಾಲು - ಪ್ರತಿವಾದಿಯ ಪರ ವಕೀಲರಿಂದ :**

**1)** ವಾದಿಗೆ ಈಗ ಸುಮಾರು 75-76 ವರ್ಷ ವಯಸ್ಸು ಆಗಿದೆ. ಅವರಿಗೆ ಕಿವಿ ಕೇಳುವುದಿಲ್ಲ. ವಾದಿಯ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ದಾವಾ ಸ್ವತ್ತಿನ ಹೊರತಾಗಿ ವಾದಿಯ ಬೇರೆ ಸ್ವತ್ತುಗಳು ಗಂಗಾವರ ಚೌಡಪ್ಪನಹಳ್ಳಿಯಲ್ಲಿ ಇವೆ. ಅವು ಸರ್ವೆ ಸಂಖ್ಯೆ 221 ರಲ್ಲಿ 10 ಗುಂಟೆ, ಸರ್ವೆ ಸಂಖ್ಯೆ 146 ರಲ್ಲಿ 1 ಎಕರೆ ಆಗಿರುತ್ತದೆ. ಸದರಿ ಸ್ವತ್ತುಗಳ ಹೊರತಾಗಿ ವಾದಿಯ ಬೇರೆ ಯಾವುದೇ ಸ್ವತ್ತುಗಳು ಇಲ್ಲ. ದಾವಾ ಆಸ್ತಿ ಮೂಲತಃ ದರ್ಖಾಸ್ತಿನಿಂದ ಮಂಜೂರು ಆದ ಆಸ್ತಿ ಎಂದರೆ ಸರಿ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವ್ಯಕ್ತಿಗಳಿಗೆ ಜಮೀನುಗಳನ್ನು ದರ್ಖಾಸ್ತು ರೂಪದಲ್ಲಿ ನೀಡುತ್ತಿದ್ದರು ಎಂದರೆ ಸರಿ. 1966 ರಲ್ಲಿ ದಾವಾ ಸ್ವತ್ತು ಮಂಜೂರು ಆಗಿರುತ್ತದೆ. ನಿ.ಪಿ.3 ರ ಪ್ರಕಾರ ಮುತ್ಯಾಲಪ್ಪ ಅವರ ದಿ.05-10-1985 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಇಂಥಹದ್ದೇ ವರ್ಷ ಮುತ್ಯಾಲಪ್ಪ ಅವರು ಮರಣ ಹೊಂದಿದ್ದರು ಎಂದು ಗೊತ್ತೇ ಇಲ್ಲ. ನ್ಯಾಯಾಲಯದಲ್ಲಿ ಅಲಭ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ನಿ.ಪಿ.3 ನ್ನು ಪಡೆದುಕೊಂಡಿರುತ್ತೇವೆ. ನ್ಯಾಯಾಲಯದಲ್ಲಿ ಸಿ.ಮಿಸ್. 256-2015 ನ್ನು ದಾಖಲಿಸಿದ ನಂತರ ಅದೇ ದಿನಾಂಕ ಎಂದು ತಿಳಿದುಬಂತು. 1985 ಕ್ಕಿಂತ ಪೂರ್ವದಲ್ಲಿ ಮುತ್ಯಾಲಪ್ಪನವರು ಅವರ ವ್ಯವಹಾರಿಕ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ಮುತ್ಯಾಲಪ್ಪನವರು ದಾವಾ ಸ್ವತ್ತಿನ ಕುರಿತು ಬೇರೆ ಯಾವುದೇ ಪ್ರಕರಣವನ್ನು ನಡೆಸಿದ್ದರೋ ಎಂದು ನನಗೆ ಮಾಹಿತಿ ಇಲ್ಲ. ವಾದಿ ಯಾವುದೇ ದಾವೆಗಳನ್ನು ನಡೆಸಿದ್ದರೋ ಎಂದು ನನಗೆ ಮಾಹಿತಿ ಇಲ್ಲ. ನಾವು ಆದಿ ಕರ್ನಾಟಕ ಜಾನಂಗಕ್ಕೆ ಸೇರಿದವರು. ಮುನಿರಾಮಯ್ಯ ತಂದೆ ಮುತ್ಯಾಲಪ್ಪ ಎನ್ನುವ ವ್ಯಕ್ತಿ ಗಂಗಾವರ ಚೌಡಪ್ಪನಹಳ್ಳಿಯಲ್ಲಿ ವಾದಿಯನ್ನು ಬಿಟ್ಟು ಬೇರೆ ಯಾರೂ ಇಲ್ಲ. ನಾನು

ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ಬರೆದಿರುವ ಮುನಿರಾಮಯ್ಯ ತಂದೆ ಮುತ್ಯಾಲಪ್ಪ ಎನ್ನುವ ವ್ಯಕ್ತಿ ನಮ್ಮ ತಂದೆ ಎಂದು ಒಪ್ಪಿಕೊಂಡು ಸದರಿ ದಾಖಲೆಯನ್ನು - **ನಿ.ಡಿ.1** ಎಂದು ಗುರುತಿಸಲಾಯಿತು. ನಿ.ಡಿ.1 ರ ಪ್ರಕಾರ ಅದರಲ್ಲಿ ನಮೂದಿಸಿದ ಆಸ್ತಿಗಳು ತಳವಾರ ಚಾಕರಿ ಇನಾಂ ಜಮೀನುಗಳು ಎಂದು ನಮೂದು ಆಗಿವೆ ಎಂದರೆ ಸರಿ. ಸದರಿ ಊರಿನ ತಳವಾರ ವಂಶವೃಕ್ಷವನ್ನು ಸಹ ನಿ.ಡಿ.1 ರಲ್ಲಿ ತೋರಿಸಲಾಗಿದೆ ಎಂದರೆ ಸರಿ. ತಳವಾರ ಚಾಕರಿ ಮಾಡಿರುವುದರಿಂದ ಸದರಿ ಜಮೀನುಗಳನ್ನು ನಿ.ಡಿ.1 ರ ಪ್ರಕಾರ ಮರು ಮಂಜೂರು ಮಾಡಲಾಗಿದೆ ಎಂದರೆ ಸರಿ. ಗಂಗಾವರ ಚೌಡಪ್ಪನಹಳ್ಳಿ ಜಮೀನುಗಳ ಹೊರತಾಗಿ ಬೂದಿಗೆರೆ ಅಮಾನಿಕೆರೆ ನೀರಗಂಟಿ ಜಮೀನುಗಳನ್ನು ಸಹ ಮರು ಮಂಜೂರಾತಿ ಮಾಡಲಾಗಿದೆ ಎಂದರೆ ಸರಿ. ನಮ್ಮ ಪರಿವಾರದವರಿಂದ ಆ ಬಗ್ಗೆ 1979 ರಲ್ಲಿ ಮರು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ನಿ.ಡಿ.1 ರಲ್ಲಿ 1979 ರಲ್ಲೇ ಮುನಿರಾಮಯ್ಯ ಎನ್ನುವವರು ಅವರ ತಂದೆ ಮುತ್ಯಾಲಪ್ಪ ತೀರಿಹೋಗಿರುತ್ತಾರೆ ಎಂದು ತಿಳಿಸಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಸಿರುತ್ತಾರೆ ಎಂದರೆ ಸರಿ. ಈ ದಾವೆ ದಾಖಲಿಸಲು ಸುಳ್ಳು ಮಾಹಿತಿ ನೀಡಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದ ಆದೇಶ ಪಡೆದು ನಿ.ಪಿ.3 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತನ್ನು ಯಾವುದೇ ಹರಾಜಿನಲ್ಲಿ ಕೊಂಡುಕೊಂಡಿರುವುದಿಲ್ಲ. ಮಂಜೂರು ಆಗಿರುತ್ತದೆ ಎಂದು ನುಡಿಯುತ್ತೇನೆ. ವಾದಿಯ ತಂದೆ ಮುತ್ಯಾಲಪ್ಪ ದಾವಾ ಸ್ವತ್ತಿನ ಬಗ್ಗೆ ಯಾವುದೇ ದಾಖಲೆಗಳನ್ನು ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ತಾತ ಹೆಬ್ಬೆರಳ ಗುರುತು ಹಾಕುತ್ತಿದ್ದರು, ಸಹಿ ಮಾಡುತ್ತಿರಲಿಲ್ಲ. ನಾನು ಜನಿಸಿದ ನಂತರ ನಮ್ಮ ತಾತ ತೀರಿಹೋಗಿರುತ್ತಾರೆ. ನನ್ನ ಪ್ರಮಾಣ ಪತ್ರದ ಪ್ರಕಾರ ದಿ.10-07-2021 ರಂದು ನನ್ನ ವಯಸ್ಸು 29 ವರ್ಷ ಆಗಿತ್ತು. ನನ್ನ ಪ್ರಕಾರ ನಮ್ಮ ತಾತ 1992 ರ ಆಸು-ಪಾಸಿನಲ್ಲಿ ತೀರಿಹೋಗಿರುತ್ತಾರೆ ಎಂದರೆ ನನಗೆ ಸ್ಪಷ್ಟವಾದ ಮಾಹಿತಿ ಇಲ್ಲ. ನಮ್ಮ ತಾತನ ಹೆಬ್ಬೆರಳ ಗುರುತನ್ನು ತಿಳಿದುಕೊಳ್ಳಲು ಅರ್ಜಿ ಒಂದು ಇದೆ, ಬೇರೆ ದಾಖಲೆಗಳು ಇದೆಯೋ

ಎಂದು ಸ್ಪಷ್ಟವಾಗಿ ಗೊತ್ತಿಲ್ಲ. ನಿ.ಪಿ.8 ರ ಮೇಲೆ ಇರುವುದು ನನ್ನ ಪ್ರಕಾರ ನಮ್ಮ ತಾತನ ಹೆಬ್ಬೆರಳ ಗುರುತು. ನಿ.ಪಿ.8 ನ್ನು ಪುಷ್ಟೀಕರಿಸಲು ನಮ್ಮ ಬಳಿ ಬೇರೆ ದಾಖಲೆಗಳು ಇಲ್ಲ. ತಳವಾರ ಚಾಕರಿ ಮಾಡುವ ವ್ಯಕ್ತಿಗಳು ಬಾರಾಬಲೂತಿ ಪುಸ್ತಕದಲ್ಲಿ ವಾರ್ಷಿಕವಾಗಿ ತಮ್ಮ ಹೆಬ್ಬೆರಳ ಗುರುತುಗಳನ್ನು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಗಂಗಾವರ ಚೌಡಪ್ಪನಹಳ್ಳಿಯ ನೌಕರಿ ಇನಾಂ ಪುಸ್ತಕಗಳನ್ನು ಹಾಜರುಪಡಿಸಲು ನನ್ನ ತಕರಾರು ಇದೆ. ಸಾಕ್ಷಿಯು ಸದರಿ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅದನ್ನು ತಂದು ತೋರಿಸುತ್ತೇನೆ ಎಂದು ಪುನಃ ನುಡಿಯುತ್ತಾರೆ. ದಾವಾ ಸ್ವತ್ತಿನ ಜಮೀನುಗಳ ಬಗ್ಗೆ ಪಟ್ಟಾ, ಗೇಣಿ ಮತ್ತು ಹಿಡುವಳಿದಾರ ಪುಸ್ತಕಗಳನ್ನು ನೀಡಿರುತ್ತಾರೋ ಎಂದು ನನಗೆ ಮಾಹಿತಿ ಇಲ್ಲ, ನಾನು ತಿಳಿದುಕೊಂಡು ಬಂದು ತಿಳಿಸುತ್ತೇನೆ. 1960 ರಿಂದ 1970 ರ ಅವಧಿಯಲ್ಲಿ ದಾವಾ ಸ್ವತ್ತಿಗೆ ತೆರಿಗೆ ಪಾವತಿಸಿದ ದಾಖಲೆಗಳು ನಮ್ಮ ಬಳಿ ಇರಬಹುದು.

**ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd./-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**